ಅವರ ನಿದ್ದೆಗೆಡಿಸಿದೆ. ಅದನ್ನು ಎರಡೂ ರಾಜ್ಯಗಳ ಗಡಿ ಜಿಲ್ಲೆಗಳ ಎಸ್‌ಪಿಗಳೂ ಸೇರಿದಂತೆ ಹಿರಿಯ ಅಧಿಕಾರಿಗಳಿಗೆ ತಿಳಿಸಲು ಅವರೇ ಬರುತ್ತಿದ್ದಾರೆ ಎಂಬ ಮಾಹಿತಿ ಬಂದಾಗ ಕಮಿಷನರ್ ಪ್ರದೀಪ್ ಪುರಿ ಆತಂಕಗೊಂಡಿದ್ದರು.

ತಮ್ಮ ಕಮಿಷನರೇಟ್ ವ್ಯಾಪ್ತಿಯಲ್ಲಿ ಏನೋ ನಡೆಯುತ್ತಿದೆ ಎನ್ನುವ ಅನುಮಾನ ಅವರಿಗಿತ್ತು. ಆದರೆ ಅದೇನೆಂದು ಸ್ಪಷ್ಟವಾಗಿರಲಿಲ್ಲ. ಈಗ ರಾಘವನ್ ತರುವ ಮಾಹಿತಿ ಬಗ್ಗೆ ಅವರಿಗೆ ಕುತೂಹಲ ಇತ್ತು. ಹನ್ನೊಂದರ ಹೊತ್ತಿಗೆ ಸಭೆ ಆರಂಭವಾಯಿತು.

ಆಂಧ್ರ, ತೆಲಂಗಾಣ ಮತ್ತು ಒಡಿಶಾ ಪೊಲೀಸರಿಗೆ ಬೇಕಾಗಿರುವ ವ್ಯಕ್ತಿಯೊಬ್ಬ ನಿಮ್ಮ ಸಿಟಿಯಲ್ಲಿ ಅಂಡರ್‌ಗ್ರೌಂಡ್‌ನಲ್ಲಿದ್ದಾನೆ ಎಂದು ರಾಘವನ್ ಹೇಳಿದಾಗ ಎರಡೂ ಜಿಲ್ಲೆಗಳ ಹಿರಿಯ ಅಧಿಕಾರಿಗಳಿಗೆ ಅದು ಮೊದಲ ಮಾಹಿತಿ ಆಗಿತ್ತು.

ತಲೆ ಮರೆಸಿಕೊಂಡಿರೊ ವ್ಯಕ್ತಿ ತುಂಬಾ ಡೇಂಜರಸ್ ಎಲಿಮೆಂಟ್. ಮೂರೂ ರಾಜ್ಯಗಳಲ್ಲಿ ಅವನಿಗೆ ಫ್ಯಾನ್ ಫಾಲೋವರ್ಸ್ ಇದಾರೆ. ಅವನ ಹೆಸರು ಕೊಲ್ಲಪಾಟಿ ಬಾಲರಾಜು ಅಂತ. ಅವನನ್ನು ಕೆಬಿ ಅಂತಲೂ ಕರೀತಾರೆ. ಆಂಧ್ರದಲ್ಲಿ ಬಾಲಯ್ಯ, ತೆಲಂಗಾಣದಲ್ಲಿ ಕೆ.ಬಿ. ಚೌಧರಿ. ಒಡಿಶಾದಲ್ಲಿ ಬ್ಯಾನರ್ಜಿ. ಕೆಲವರು ಅವನನ್ನು ಅಯ್ಯಗಾರು ಅಂತಲೂ ಕರೀತಾರೆ. ಅವನಿಗೆ ಐವತ್ತು ವರ್ಷ. ನೋಡ್ದೋಕೆ ಅರವತ್ತು ದಾಟಿದವನ ಹಾಗೆ ಕಾಣ್ತಾನೆ. ತುಂಬಾ ಸೆನ್ಸಿಟಿವ್ ಮನುಷ್ಯ. ಸಾಹಿತ್ಯ, ಕಲೆ, ಇತಿಹಾಸದಲ್ಲಿ ಅವನಿಗೆ ಆಸಕ್ತಿ ಇದೆಯಂತೆ. ಅವನ ಒಂದೇ ಒಂದು ಫೋಟೊ ಸಹ ಪೊಲೀಸರ ಹತ್ತಿರ ಇಲ್ಲ. ಹತ್ತು ವರ್ಷಗಳ ಹಿಂದೆ ಮಾಡಿಸಿದ್ದ ಸ್ಕೆಚ್ ಇದೆ. ಅವನನ್ನು ಕೆಲವರು ನೋಡಿದ್ದಾರೆ. ಅವನು ನಿಮ್ಮ ಸಿಟಿಗೆ ಟ್ರೀಟ್‌ಮೆಂಟ್‌ಗೆ ಅಂತ ಬಂದಿದ್ದಾನೆ ಅನ್ನೋ ಮಾಹಿತಿ ನನಗೆ ಬಂದಿದೆ.

ಮೂರು ತಿಂಗಳ ಹಿಂದೆ ನಂದ್ಯಾಲ ಹತ್ತಿರ ಒಂದು ಮಿಲ್‌ನ ಕಾರ್ಮಿಕರ ಎರಡು ಸಂಘಗಳವರು ಹೊಡೆದಾಡಿಕೊಂಡಿದ್ದರು. ಅದರಲ್ಲಿ ಅವನೇ ಪ್ರೈಮ್ ಅಕ್ಯೂಸ್ಡ್. ಅವನಿಗೆ ಬುಲೆಟ್ ಬಿದ್ದಿತ್ತು. ಸೀರಿಯಸ್ ಕಂಡೀಷನ್‌ನಲ್ಲೂ ಅವನು ಎಸ್ಕೇಪ್ ಆದ. ಅವನು ನಂದ್ಯಾಲದಿಂದ ಇಲ್ಲೀ ತನಕ ಬಂದದ್ದು ಹೇಗೆ ಅಂತ ಯೋಚಿಸಿದರೆ ಅವನ ನೆಟ್ ವರ್ಕ್ ಎಷ್ಟು ದೊಡ್ಡದು ಅಂತ ಗೊತ್ತಾಗುತ್ತೆ. ಅವನಿಗೆ ಸರ್ಜರಿ ಆಗಿದೆ. ಇಲ್ಲಿ ಪೋಸ್ಟ್ ಆಪರೇಷನಲ್ ಟ್ರೀಟ್‌ಮೆಂಟ್‌ನಲ್ಲಿದ್ದಾನೆ. ಸದ್ಯದಲ್ಲೇ ಇಲ್ಲಿಂದ ಬೇರೆ ಕಡೆಗೆ ಹೋಗ್ತಾನೆ ಅಂತಲೂ ಮಾಹಿತಿ ಇದೆ. ಇಷ್ಟೇ ಆಗಿದ್ದರೆ ಅದು ಅಷ್ಟೊಂದು ಸೀರಿಯಸ್ ಅಲ್ಲ. ಅವನನ್ನು ಇಲ್ಲೇ ಅಥವಾ ಬೇರೆಲ್ಲಾದರೂ ಹಿಡೀಬಹುದು... ನಂಗೆ ವರಿ ಆಗ್ತಿರೋದು ನೇಪಾಳದಿಂದ ಕೆಲವು ಸೊಫೆಸ್ಟಿಕೇಟೆಡ್ ವೆಪನ್‌ಗಳು ಇಲ್ಲಿಗೆ ಬಂದಿವೆ ಅನ್ನೋದು! ಅವನ್ನು ಕೆಬಿಯೇ ತರಿಸಿರಬಹುದು ಅಂತ. ನಿಮ್ಮ ಸಿಟಿಯಲ್ಲಿ ಎಲ್ಲೋ ಅವನ್ನು ಅಡಗಿಸಿಟ್ಟಿದ್ದಾರೆ. ಅವನ್ನು ಇಲ್ಲಿಗೆ ಯಾರು ತಂದರು, ಯಾಕೆ ತಂದರು ಅನ್ನೋದು ಗೊತ್ತಿಲ್ಲ. ಅವರ ಟಾರ್ಗೆಟ್ ಯಾರು ಅನ್ನೋದೂ ಗೊತ್ತಿಲ್ಲ. ವೆಪನ್‌ಗಳನ್ನು ಇಲ್ಲಿ ಬಳಸೋದಕ್ಕೆ ತಂದಿದ್ದಾರೋ ಅಥವಾ ಇಲ್ಲಿಂದ ಇನ್ನೆಲ್ಲಿಗಾದರೂ ಸಾಗಿಸ್ತಾರೋ ಗೊತ್ತಿಲ್ಲ. ಈ ಬೆಳವಣಿಗೆ ಸರ್ಕಾರಕ್ಕೆ ದೊಡ್ಡ ತಲೆನೋವಾಗಿದೆ. ಹೋಮ್ ಮಿನಿಸ್ಟರ್‌ಗೆ ನಾನು ಉತ್ತರ ಹೇಳಬೇಕಾಗುತ್ತೆ. ವೆಪನ್‌ಗಳು ಎಲ್ಲಿವೆ ಅನ್ನೋದನ್ನು ಮೊದಲು ಪತ್ತೆ ಮಾಡಬೇಕು. ಅವನ್ನು ತಂದವರು ಮತ್ತು ಇಲ್ಲಿ ಇಟ್ಟುಕೊಂಡವರನ್ನೂ ಹಿಡಿಯಬೇಕು. ಇದು ನಿಮ್ಮ ಮುಂದೆ ಇರೋ ಬಿಗ್ ಟಾಸ್ಕ್ ಎನ್ನುತ್ತ ರಾಘವನ್, ಕಮಿಷನರ್ ಮುಖ ನೋಡಿದರು.

ಸದಾ ಉತ್ಸಾಹದಿಂದ ಪುಟಿಯುತ್ತ, ಜೋಕ್ ಮಾಡಿಕೊಂಡು ದೊಡ್ಡದಾಗಿ ನಗುತ್ತ, ಆಗಾಗ ಉರ್ದು ಶಾಯರಿಗಳನ್ನು ಹೇಳುತ್ತ, ಕನ್ನಡದಲ್ಲೇ ಎಲ್ಲರೊಂದಿಗೆ ಮಾತಾಡಲು ಇಷ್ಟಪಡುತ್ತಿದ್ದ ಪಂಜಾಬ್ ಮೂಲದ ಪ್ರದೀಪ್ ಪುರಿ ಸಾಹೇಬರು, ರಾಘವನ್ ಹೇಳಿದ ಮಾಹಿತಿ ಕೇಳಿ ಕೆಲ ಸೆಕೆಂಡು ಸುಮ್ಮನೆ ಕೂತುಬಿಟ್ಟರು. ಸಾವರಿಸಿಕೊಂಡು, ಎಸ್‌ಪಿ ಅವರತ್ತ ನೋಡುತ್ತ ಇದೆಲ್ಲ ಏನು? ಏನು